Cc774/2023. Cw1.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

**<u>ಸಿ.ಸಿ.ನಂ.774/2023.</u>**

ದಿನಾಂಕಃ**08.12.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ಕಾಳಮ್ಮ | ಚಾಸಾ-1, ಪ್ರಾಸಾ-1 |
| ಗಂಡನ ಹೆಸರು | ಪುಟ್ಟಪ್ಪ | |
| ವಯಸ್ಸು | 63 ವರ್ಷ | |
| ಉದ್ಯೋಗ | ವ್ಯವಸಾಯ | |
| ವಾಸ | ಕುಪ್ಪಾಳ ಗ್ರಾಮ | |

<u>ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ</u>

ಚಾಸಾ 2, 5 ಹಾಗೂ ಆರೋಪಿತರು ಗೊತ್ತು. ಚಾಸಾ 5 ನನ್ನ ಮಗ. ಚಾಸಾ 3, 4 ನನಗೆ ಗೊತ್ತಿಲ್ಲ. ನನ್ನ ಇಬ್ಬರು ಮಕ್ಕಳು ಬೆಂಗಳೂರಿನಲ್ಲಿ ಇದ್ದಾರೆ. ನಾನು ಮತ್ತು ನನ್ನ ಗಂಡ ಊರಿನಲ್ಲಿ ವ್ಯವಸಾಯ ಮಾಡಿಕೊಂಡು ವಾಸವಿದ್ದೇವೆ. ಸುಮಾರು 3 ವರ್ಷಗಳ ಹಿಂದೆ ಒಂದು ಬೆಳಗ್ಗೆ 9 ಗಂಟೆಗೆ ಎಂದಿನಂತೆ ನಾನು ನಮ್ಮ ಸರ್ವೆ ನಂ.123 ರ ಜಮೀನಿನಲ್ಲಿ ರಾಗಿ ಬೆಳೆ ಬೆಳೆದಿದ್ದು ಕೆಲಸಕ್ಕೆ ಹೋಗಿದ್ದೆ. ಅಲ್ಲಿ ನೋಡಿದಾಗ ಆರೋಪಿತರು ರಾಗಿ ಬೆಳೆಗೆ ದನಗಳನ್ನು ಬಿಟ್ಟು ಮೇಹಿಸುತ್ತಿದ್ದರು. ನಾನು ಈ ಬಗ್ಗೆ ಆರೋಪಿತರನ್ನು ಪ್ರಶ್ನಿಸಿದ್ದಕ್ಕೆ ಆರೋಪಿತರೆಲ್ಲರು ನನ್ನನ್ನು ಹಿಡಿದುಕೊಂಡು ಹೊಡೆದಿರುತ್ತಾರೆ. ಒಬ್ಬ ಆರೋಪಿಯು ನನ್ನ ಕುತ್ತಿಗೆ ಹಿಡಿದುಕೊಂಡು ಇನ್ನೊಬ್ಬ ಆರೋಪಿಯು ನನ್ನ ಎಡ ಕಿವಿಗೆ ಜೋರಾಗಿ ಹೊಡೆದಿರುತ್ತಾನೆ. ನಂತರ ನಾನು ಕಳಕ್ಕೆ ಬಿದ್ದಿರುತ್ತೇನೆ. ಆರೋಪಿತರು ನನಗೆ ಕೆಟ್ಟದಾಗಿ ಬೈದಿರುತ್ತಾರೆ ಹಾಗೂ ನೀನು ಇರುವುದು ಬೇಡ ಇವಳಿಂದಲೇ ಜಗಳವಾಗುವುದು ಇವಳನ್ನು ಸಾಯಿಸಬೇಕು ಎಂದು ಹೇಳಿ ಬೆದರಿಕೆ ಹಾಕಿರುತ್ತಾರೆ. ನಂತರ ನನ್ನನ್ನು ಮಾನಭಂಗ ಮಾಡಲು ಪ್ರಯತ್ನಿಸಿರುತ್ತಾರೆ. ಜಗಳವಾದಾಗ ಬೇರೆ ಯಾರು ಇರಲಿಲ್ಲ. ನಂತರ, ಯಾರೋ ಬಂದು ನನ್ನನ್ನು ಆಸ್ಪತ್ರೆಯ ಬಳಿ ಬಿಟ್ಟರು. ಕಡೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದುಕೊಂಡು, ನಂತರ ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಸ್ಕ್ಯಾನಿಂಗ್ ಮಾಡಿಸಿಕೊಂಡು ವಾಪಾಸು ಕಡೂರಿನ ಆಸ್ಪತ್ರೆಗೆ ಬಂದಿರುತ್ತೇನೆ. ನನ್ನ ಮಗ ಕಡೂರಿನ

ಆಸ್ಪತ್ರೆಗೆ ಬಂದಿರುತ್ತಾನೆ. ಆ ನಂತರ ನನ್ನ ಹಿರಿಯ ಮಗ, ಸೊಸೆ ಮತ್ತು ಇತರರು ಬಂದು ನೋಡಿಕೊಂಡರು.

ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ಸಹಿಯನ್ನು ನಾನು ಆಸ್ಪತ್ರೆಯಲ್ಲಿ ಇದ್ದಾಗ ಮಾಡಿರುತ್ತೇನೆ. ಸದರಿ ದಾಖಲೆಯು ಹೇಳಿಕೆ ದೂರು ಆಗಿದ್ದು ಅದನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

ಗಲಾಟೆಯಾದ 2 ದಿನಗಳ ನಂತರ ಪೊಲೀಸರು ಗಲಾಟೆಯಾಗಿದ್ದ ನಮ್ಮ ಹೊಲದ ಬಳಿಗೆ ಬಂದಿರುತ್ತಾರೆ. ಆಗ ಪೊಲೀಸರ ಜೊತೆ ಇನ್ನಿಬ್ಬರು ವ್ಯಕ್ತಿಗಳು ಬಂದಿದ್ದರು ಅವರ ಪೈಕಿ ಒಬ್ಬರ ಹೆಸರು ಪ್ರಕಾಶ್, ಇನ್ನೊಬ್ಬರ ಹೆಸರು ನನಗೆ ನೆನಪಿಲ್ಲ. ಅಲ್ಲಿ ಪೊಲೀಸರು ಪರಿಶೀಲನೆ ಮಾಡಿ ಬರವಣಿಗೆ ಮಾಡಿಕೊಂಡು ಹೋದರು. ಸಮಯ ನನಗೆ ನೆನಪಿಲ್ಲ. ಈಗ ನೋಡುತ್ತಿರುವ ಇನ್ನೊಂದು ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆಯು ಮಹಜರ್ ಆಗಿದ್ದು ಅದನ್ನು ನಿಪಿ-2 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ2 ಎ ಅನ್ನು ನಾನು ಹೊಲದಲ್ಲಿ ಮಾಡಿರುತ್ತೇನೆ.

ಈಗ ನೋಡುತ್ತಿರುವ ಪೋಟೋದಲ್ಲಿ ನಾನು, ಪೊಲೀಸರು, ಚಾಸಾ 2 ರವರು ಇದ್ದಾರೆ, ಅದನ್ನು ಹೊಲದಲ್ಲಿ ತೆಗೆದಿರುತ್ತಾರೆ. ಸದರಿ ಪೋಟೋವನ್ನು ನಿಪಿ 3 ಎಂದು ಗುರುತಿಸಲಾಯಿತು.

ಈಗ ನೋಡುತ್ತಿರುವ ಇನ್ನೊಂದು ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆಯು ನ್ಯಾಯಾಲಯದಲ್ಲಿ ದಾಖಲು ಮಾಡಿಕೊಂಡ ಕಲಂ164 ರಡಿ ಹೇಳಿಕೆ ಪ್ರತಿಯಾಗಿದ್ದು, ಅದನ್ನು ನಿಪಿ-4 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-4(ಎ) ಎಂದು ಗುರುತಿಸಲಾಯಿತು. ಸದರಿ ಸಹಿಗಳನ್ನು ಎಲ್ಲಿ ಮಾಡಿರುತ್ತೇನೆ ಎಂದು ನನಗೆ ನೆನಪಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೊಜನೆಯ ಪ್ರಕರಣಕ್ಕೆ ಭಾಗಶಃ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸ ಸ ಅ ರವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

ಪಾಟೀಸವಾಲುಃ ಮಾನ್ಯ ಸ ಸ ಅ ರವರಿಂದ ಃ

ದಿಃ28.11.2021 ರಂದು ಬೆಳಗ್ಗೆ 10 ಗಂಟೆಗೆ ಆರೋಪಿತರು ಹಸುಗಳನ್ನು ರಾಗಿ ಬೆಳೆಗೆ ಬಿಟ್ಟು ಮೇಹಿಸಿದ್ದು, ನಾನು ಹಸುಗಳಿಂದ ಮೇಹಿಸಿದ್ದಾರೆ ಎಂದು ಬೈಯುತ್ತಿದ್ದಾಗ 1 ರಿಂದ 3 ನೇ ಆರೋಪಿತರು ನನ್ನ ಜಮೀನಿಗೆ ಅತಿಕ್ರಮ ಪ್ರವೇಶ ಮಾಡಿದರು ಎಂದರೆ ಸರಿ. ನಂತರ 2 ನೇ ಆರೋಪಿ ನನ್ನ ಎಡ ಕಿವಿಗೆ ಕೈನಿಂದ ಹೊಡೆದರು ಎಂದರೆ ಸರಿ. ನಂತರ ಚಾಸಾ 4 ರವರು ನನ್ನನ್ನು ಊರಿನ ಬಸ್ಸುನಿಲ್ದಾಣದ ವರೆಗೂ ಕರೆದುಕೊಂಡು ಬಂದರು ಎಂದರೆ ಸರಿ. ನಂತರ ನಾನು ಗಲಾಟೆಯ ವಿಚಾರವನ್ನು ನನ್ನ ಮಕ್ಕಳಿಗೆ ತಿಳಿಸಿದೆ ಎಂದರೆ ಸರಿ.

ನಂತರ ದಿಃ30.11.2021 ರಂದು ನಾನು ತೋರಿಸಿದ ಗಲಾಟೆಯಾದ ಜಾಗದಲ್ಲಿ ಚಸಾ 2, 3 ರವರ ಸಮಕ್ಷಮ ನಿಪಿ 2 ರಂತೆ ಮಧ್ಯಾಹ್ನ 1 ರಿಂದ 1.45 ಗಂಟೆಯ ವರೆಗೂ ಮಹಜರ್ ಮಾಡಿದರು ಎಂದರೆ ಸರಿ.

ನಂತರ, ದಿಃ26.03.2022 ರಂದು ನಾನು ನ್ಯಾಯಾಧೀಶರ ಮುಂದೆ ಹೇಳಿಕೆ ನೀಡಿ ಹೇಳಿಕೆಗೆ ಸಹಿ ಮಾಡಿರುತ್ತೇನೆ ಎಂದರೆ ಸರಿ.

ಪಾಟೀಸವಾಲುಃ ಆರೋಪಿ ಪರ ಶ್ರೀ. ಕೆ ಆರ್ ಯು ವಕೀಲರಿಂದಃ ಇ

ಗಲಾಟೆಯಾಗಿದೆ ಎಂದು ಹೇಳುವ ದಿನಾಂಕ ಯಾವುದು ಎಂದು ನನಗೆ ಓದು ಬರಹ ಬರದ ಕಾರಣ ದಿನಾಂಕ ಹೇಳಲು ಗೊತ್ತಾಗುವುದಿಲ್ಲ. ಹಸು ಮೇಹಿತ್ತಿದ್ದುದ್ದನ್ನು ನಾನು ನೋಡಿರುತ್ತೇನೆ. ಹಸುಗಳನ್ನು ಬೆಳಿಗ್ಗೆಯೇ ಮೇಹಿತ್ತಿದ್ದವು. ಜಮೀನು ನನ್ನ ಗಂಡನ ಹೆಸರಿನಲ್ಲಿ ಇದೆ, ಅದರ ಸರ್ವೆ ನಂ.123. ಆ ದಿನ 2 ಹಸುಗಳು ಮೇಹಿಸುತ್ತಿದ್ದವು. ಚಾಸಾ 5(ಚಂದ್ರಶೇಖರ್) ನನ್ನ ಮಗ. 1 ನೇ ಆರೋಪಿಯ ಹೆಸರಿಗೆ ಇದ್ದ ಜಮೀನನ್ನು ನನ್ನ ಮಗನಾದ ಚಾಸಾ 5 ರವರು ಪೋರ್ಜರಿ ಸಹಿ ಮಾಡಿಕೊಂಡು ಅವನ ಹೆಸರಿಗೆ ಮಾಡಿಕೊಂಡಿರುತ್ತಾನೆ ಎಂದು ಆರೋಪಿತರು ಚಾಸಾ 5 ರವರ ವಿರುದ್ಧ ದೂರು ನೀಡಿರುತ್ತಾರೆ ಎಂದರೆ ಸರಿ. ನನ್ನ ಮಗನ ಮೇಲೆ ಕೇಸು ದಾಖಲು ಮಾಡಿದರು ಎಂಬ ಕಾರಣಕ್ಕೆ ದ್ವೇಷದಿಂದ ಈ ಸುಳ್ಳು ದೂರನ್ನು ಆರೋಪಿತರ ವಿರುದ್ಧ ನಾವು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ.

ನಿಪಿ 1 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ, ನನಗೆ ಓದಲು ಬರುವುದಿಲ್ಲ. ನಾನು ಆಸ್ಪತ್ರೆಯಲ್ಲಿ ಮತ್ತು ಗಲಾಟೆಯಾದ ಜಮೀನಿನ ಬಳಿ ಸಹಿ ಮಾಡಿರುತ್ತೇನೆ.

ಆರೋಪಿತರು ನನ್ನ ಮಗನ ಮೇಲೆ ಕೇಸು ದಾಖಲು ಮಾಡಿದ ದ್ವೇಷದಿಂದ ನಾನು ಮತ್ತು ನನ್ನ ಮಕ್ಕಳು ಸೇರಿಕೊಂಡು ಈ ಸುಳ್ಳು ಕೇಸು ದಾಖಲು ಮಾಡಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಗಲಾಟೆ ನಡೆದಿದೆ ಎಂದು ಹೇಳುತ್ತಿರುವ ಜಮೀನು ನನ್ನ ಗಂಡನ ಹೆಸರಿನಲ್ಲಿ ಇರುವುದಿಲ್ಲ ಎಂದರೆ ಸರಿ ಸಾಕ್ಷಿಯು ಮುಂದುವರೆದು ಅದನ್ನು ನನ್ನ ಅಳಿಯ ಹೆಸರಿಗೆ ಮಾಡಿರುತ್ತೇವೆ.

ಚಿಕ್ಕಮಗಳೂರಿನ ಆಸ್ಪತ್ರೆಗೆ ಹೋಗಿದ್ದ ಬಗ್ಗೆ ದಾಖಲೆಗಳನ್ನು ಪೊಲೀಸರಿಗೆ ಕೊಟ್ಟಿರುತ್ತೇನೆ. ನಾನು ಚಿಕ್ಕಮಗಳೂರಿನ ಆಸ್ಪತ್ರೆಗೆ ಹೋಗಿಲ್ಲ ಆ ಕಾರಣದಿಂದಲೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ನನ್ನ ಮನೆಯಲ್ಲಿ ದಾಖಲೆಗಳು ಇವೆ. ನಾನು ಪೊಲೀಸರ ಮುಂದೆ ಮರು ಹೇಳಿಕೆಯನ್ನು ನೀಡಿರುವುದಿಲ ಎಂದರೆ ಸರಿ.

<u>ಮರು ವಿಚಾರಣೆ ಃ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

ಸಹಿ/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.